ಕಥೆ

# ನಡ್ಲುಮನೆ



**ರಶ್ಮಿ ಕೆ.ಎಂ.**

ಕಲೆ: ಅಕ್ಷಯ ಹೆಗಡೆ ಜಾಲಿಮನೆ

ನಾನಿವತ್ತು ನಿಮ್ಗೊಂದು ಕತೆ ಏಳನಾ ಅಂತ ನಿಂತೀನಿ. ದಾರಿಲೋಗ ಒಬ್ರಾರ ನಿಂತು ನಾ ಏಳ ಕತೇನ ಕೇಳ್ತಾರ ಅಂತ ನೋಡನಾ? ಅಲ್ಲ ಇವ್ರಿಗೆಲ್ಲ ಏನಾಯಿತೇ, ನಾನಿಷ್ಟು ಜೋರಾಗಿ ಕಿರುಚ್ತ ಇದ್ರೂ ನನ್ನತ್ರ ಬರಾದಿರ್ಲಿ, ನನ್ನಕಡೆ ತಿರ್ಗೂ ನೋಡ್ತಿಲ್ವಲ್ಲ. ಈ ಜನಕ್ಕೆಲ್ಲಾ ಕಿವೀನೆ ಇಲ್ವೇನೋ, ಬರೀ ಬಾಯಿ ಇರದೇನೋ ಅನ್ನಂಗೆ ಮಾತಾಡ್ಕೊಂಡು ಓತಾವೆ. ಯಾರು ಕೇಳ್ಲೀ ಬಿಡ್ಲಿ ನನ್ನ ಕಣ್ಣಾರೆ ನಾನು ನೋಡಿರೋ, ನೋಡ್ತಿರೋ ಕತೆನಾ ಏಳ್ಬಿಡ್ತೀನಿ.

ನನ್ನೆಸ್ರೂ... ಬ್ಯಾಡ ಬಿಡಿ, ಅದು ಈತೋ ಇಲ್ವೋ ನಂಗೇ ಗೊತ್ತಿಲ್ಲ. ಯಾಕಂದ್ರೆ ನನ್ನ ಯಾರೂ ಇಂತದ್ದು ಅಂತ ಕರೆಯೋದೂ ಇಲ್ಲ. ನಾನು ಆಗೋದು ಓಗೋದ್ನೆಲ್ಲ ನೋಡ್ಕಂಡು ಸುಮ್ನೆ ಸುಮಾರು ವರ್ಷದಿಂದ ಇಂಗೇ ನಿಂತೀನಿ. ನಾ ಏನ ಮಾಡ್ಲಿ ಏಳಿ? ಅಯ್ಯೋ ನಾನು ಯಾವ್ದೋ ಕತೆ ಏಳ್ತೀನಿ ಅಂತ ಬರೀ ನಂದೇ ಏಳದಾತು, ಅದ್ಬಿಡಿ, ಇಲ್ನೋಡಿ ಬೆಳ್ಗೆ ಬೆಳ್ಗೆ ಜಗ್ಳ ಶುರುವಾತು. ಆ ಕಡೆ ಅವ್ನು, ಈ ಕಡೆ ಇವ್ನು. ನಡ್ಲಾಗೆ ಒಬ್ನು ಆ ಕಡೇಗೊ ಈ ಕಡೇಗೋ ಗೊತ್ತಾಗ್ದೆ ಎಡ್ಬಿಡಂಗಿಯಂಗೆ ನಿಂತವ್ನೆ. ಅಂಗೆ ನಿಂತವ್ನಲ್ಲಾ, ಆ ಎಡ್ಬಿಡಂಗಿ ಮನೇನೆ ಈ ಕತೆಗೆ ನಾಯ್ಕ ಅನ್ಕೋಳಿ. ಆ ಮನೆಗೆ ನಡ್ಲು ಮನೆ ಅಂತ ಕರೀತಾರೆ. ನಾ ನೋಡ್ದಂಗೆ ಊರಿಗೆ ಮೊದ್ಲು ಮನೆ ಅದು. ಆಮೇಲೆ ಎಲ್ಡು ಮನೆ ಬಂದು, ಈ ಮನೆ ಇತ್ತಲ್ಲ, ಇದುಕ್ಕೆ ಎಡ್ಕೊಂದು ಬಲ್ಕೊಂದು ಅಂತ ಕಟ್ಕಂಡ್ರು. ಆಗ ನೋಡಿ ಆ ಮೊದ್ಲಿದ್ದ ಮನೆಗೆ ಬಂದಿದ್ದೇ ನಡ್ಲು ಮನೆ ಅಂತ ಎಸ್ರು. ಊರಾಗೆ ಯೋಸು ಮನೆಯಾದ್ರೂ ಇದು ನಡುಕ್ಕೇ ಬತಿತ್ತು. ಅದೇನು ಈ ಎಸ್ರು ಉಳ್ಸಾಕೇ ಅಂತಾನೇ ಅಂಗೆ ಕಟ್ಟರೋ ಏನೋ. ಈಗ ಮನೆಗೋಳು ಎತ್ತೆತ್ಲಾಗೋ ಬೆಳ್ಕಂಡಾವೆ ಬಿಡಿ, ಆದ್ರೂ ಇದ್ಕೆ ನಡ್ಲು ಮನೆ ಅಂತ್ಲೇ ಕರಿಯಾದು. ಈ ಮನೆ ಏನೂ ಕಮ್ಮಿ ಅಲ್ಲ. ಆಗೆಲ್ಲ ಸೈಟು-ಗೀಟು ಲೆಕ್ಕ ಇರ್ಲಿಲ್ಲ ನೋಡಿ, ಅರ್ಧ ಊರೇ ಆಗೋಷ್ಟು ಒಂದು ಮನೆ ಕಟ್ಟುದ್ರು. ಈಗ ಆ ನಡ್ಲು ಮನೆ ಒಡ್ಕಂಡು ಮೂರ್ನಾಕು ಮನೆ ಆಗಿ, ಮಕ್ಳು-ಮರಿಮಕ್ಳು, ಅಣ್ತಮ್ಮ, ದಾಯಾದಿಗಳು ಅಂತ ಒಂದು ಮೂವತ್ತು ಜನ ಇರ್ಬೋದೇನೋ. ಆ ಮನೆ ಕಟ್ಟಿ ಒಂದು ವರ್ಷಕ್ಕೇನೋ ಉಟ್ಟಿದೋನು ಈಗ ಆ ಮನೆ ಯಜಮಾನ್ಕೆ ನೆಡುಸ್ತವ್ನೆ. ಸುಮಾರು ತೊಂಬತ್ತು ವರ್ಷ ಆಗಿರ್ಬೋದೋ, ಇನ್ನೂ ಜಾಸ್ತಿನೋ ಗೊತ್ತಿಲ್ಲ. ಅವನು ಉಟ್ಟಾಗಿಂದ ನನ್ನುನ್ನ ಅವ್ನು, ಅವ್ನುನ್ನ ನಾನು ನೋಡ್ಕಂಡೇ ಬೆಳ್ಕಂಡ್ವಿ. ಬೆಳೆಯದು ನಿಂತ್ಮೇಲು ನೋಡ್ತಾನೆ ಇದೀವಿ.